ಗುಂಪನ್ನು ಬಸ್ ಹತ್ತಿಸಿದ ಅಕ್ಕಪಕ್ಕದ ಮನೆಯ ಅಣ್ಣ ತಂಗಿಯರು, ಒಮ್ಮೆಯೂ ತಿರುಗಿ ನೋಡದೆ ಊರ ಕಡೆ ಮುಖ ಮಾಡಿ ನಡೆಯಲು ಪ್ರಾರಂಭಿಸಿದರು. ಅವ್ವ ಮಾತ್ರ ತಿರುಗಿ ನೋಡಲೋ ಬೇಡವೋ ಎಂಬಂತೆ, ತಲೆಯಮೇಲಿನ ಸೆರಗಿನ ಅಂಚನ್ನು ಬಾಯಿಗೆ ಹಿಡಿದು ನಿಧಾನವಾಗಿ ಅವರನ್ನು ಹಿಂಬಾಲಿಸುತ್ತಿದ್ದುದು ಕಾಣಿಸುತ್ತಿತ್ತು.

ಈಗಾಗಲೇ ಎರಡನೆಯದನ್ನು ಮುಗಿಸಿ ಮೂರನೆಯ ಕವಳಕ್ಕೆ ತಯಾರಿ ನಡೆಸಿದ್ದ ದೊಡ್ಡವ್ವ, ಅನಾಯಾಸವಾಗಿ ಕಿಟಕಿಯ ಹತ್ತಿರ ಕುಳಿತು ನನ್ನನ್ನು ಪಕ್ಕಕ್ಕೆ ಎಳೆದು ಕೂರಿಸಿಕೊಂಡಿದ್ದಳು. ನಮ್ಮ ಗುಂಪಿನಲ್ಲಷ್ಟೇ ಅಲ್ಲದೆ, ಪೂರ್ತಿ ಬಸ್ಸಿನಲ್ಲಿ ನಾವಿಬ್ಬರೇ ಹೆಂಗಸರು. ಬಸ್ಸಿನಲ್ಲಿದ್ದವರೆಲ್ಲ ನಿದ್ದೆಗೆ ಜಾರುವ ಮೊದಲೇ ಟಿಕೇಟ್ ಕೊಡಬೇಕೆಂಬ ಪ್ರಯತ್ನದಲ್ಲಿದ್ದ ಕಂಡಕ್ಟರ್ ಅಲ್ಲಲ್ಲಿ ನಿಂತು ನಮ್ಮನ್ನೇ ನೋಡುತ್ತಿದ್ದುದು ಕನಿಕರವೋ, ಬೇರೆ ಇನ್ನೇನೋ ಎಂದು ಸರಿಯಾಗಿ ತಿಳಿಯಲಿಲ್ಲ. ಮುಟ್ಟಿನ ಅನಂತರ ಅವ್ವನ ಆತಂಕದೊಂದಿಗೆ ಶಾಲೆಗೂ ತಿಲಾಂಜಲಿ ಹೇಳಿದ್ದ ನಾನು, ಇಂಗ್ಲಿಷ್ ಓದುವುದು ಹೋಗಲಿ, ಕನ್ನಡದಲ್ಲಿದ್ದ ಬೋರ್ಡ್ ಅನ್ನೂ ನಿರಾಯಾಸವಾಗಿ ಓದದಂತಾಗಿದ್ದೆ. ಈ ಬಗ್ಗೆ ಸ್ವತಃ ಅವ್ವನೇ ತಲೆಕೆಡಿಸಿಕೊಳ್ಳದಿರುವಾಗ, ನಾನೇಕೆ ಚಿಂತಿಸಲಿ ಎಂದು ಸುಮ್ಮನಾಗಿದ್ದೆ. ಹಿಂದಿನ ಸೀಟಿನಲ್ಲಿ ಕುಳಿತಿದ್ದ ಮಾವ, ''ಗದಗಿಗೆ ಎಂಟು'' ಎಂದಾಗ ಮದುವೆ ಎಲ್ಲೋ ದೂರದಲ್ಲಿರಬೇಕು ಎಂದು ಅರ್ಥವಾಗಿತ್ತು. ಯಾವ ಸಂಬಂಧಿಕರ ಮದುವೆ ಎಂದು ತಿಳಿಯದ ನಾನು, ನಿದ್ದೆ ಮಾಡಲೋ ಬೇಡವೋ ಎಂದು ಯೋಚಿಸುತ್ತಲೇ ನಿದ್ದೆಗೆ ಜಾರಿದ್ದೆ. ''ಏಳ್, ಏಳ್, ಬಸ್ ನಿಂತ್ರೈತಿ, ಬಿಟ್ಟೋಗ್ಬಿಟ್ಟಾರು'' ಎಂದು ದೊಡ್ಡವ್ವ ಕೂಗಿದಾಗಲೇ ಬೆಚ್ಚಿಬಿದ್ದು ಎದ್ದು ನಿಂತಿದ್ದೆ. ನಿಂತ ರಭಸಕ್ಕೆ ಕಾಲಮೇಲಿದ್ದ ಕರವಸ್ತ್ರದ ಜೊತೆ ಚೀಲವೂ ಜಾರಿ ಕೆಳಗೆ ಬಿತ್ತು. ಹೊರಬಿದ್ದ ಬಟ್ಟೆಯನ್ನು ಪುನಃ ಒಳಗಿಡುತ್ತ ಪರೀಕ್ಷಿಸಿದ ನನಗೆ, ಒಂದರೆಕ್ಷಣ ಗಾಬರಿಯಾಯಿತು. ಮದುವೆಗೆ ಹೋಗಿ ಬರಲು ಅವ್ವ ಯಾಕೆ ನನ್ನ ಒಂದ್ ಜೊತೆ ನೈಟಿ, ಒಳಬಟ್ಟೆಗಳು ಮತ್ತು ಲಂಗ ರವಿಕೆಯನ್ನು ಕೊಟ್ಟಿದ್ದಾಳೆ ಎನ್ನುವುದು ತಿಳಿಯಲಿಲ್ಲ. ''ಯಾವಾಗ ವಾಪಸ್ ಬರದು ಮನಿಗೆ'' ಅಂತಾ ಕೇಳಿದ ನನಗೆ, ''ಜಲ್ದಿ ಬರೋಣು'' ಎಂದು ಹೇಳಿದ ದೊಡ್ಡವ್ವನ ಮಾತಿನಲ್ಲಿ ಯಾವುದೇ ಅಪಾಯದ ಮುನ್ಸೂಚನೆ ಕಾಣಲಿಲ್ಲ. ಬಸ್ ಸ್ಟ್ಯಾಂಡಿನ ಗೋಡೆಯ ಗಡಿಯಾರದಲ್ಲಿ ಸಮಯ ನಾಲ್ಕು ಐವತ್ತೈದು ತೋರಿಸುತ್ತಿತ್ತು. ಇನ್ನೇನು ಹೊರಡುವುದರಲ್ಲಿದ್ದ ಬಸ್ಸಿನ ಕಂಡಕ್ಟರ್ ದೊಡ್ಡದಾಗಿ ಜನರನ್ನು ಕೂಗಿ ಕರೆಯುತ್ತಿದ್ದ. ಕುಮಟಾ – ಮಂಗಳೂರ್, ಸಿರ್ಸಿ – ಕುಮಟಾ – ಮಂಗಳೂರ್ ಎಂದು ಕೂಗುತ್ತಿದ್ದ ಬಸ್ಸನ್ನು ಆತುರಾತುರವಾಗಿ ಹತ್ತಿ, ಸಿಕ್ಕ ಸಿಕ್ಕಲ್ಲಿ ಕುಳಿತೆವು. ನಮ್ಮವರೆಲ್ಲಾ ಎಲ್ಲಿ ಕುಳಿತಿದ್ದಾರೆ ಎಂದು ತಿಳಿದುಕೊಳ್ಳುವುದು ಮುಖ್ಯವಾಗಿ ಕುಳಿತ ಜಾಗದಿಂದಲೇ ಕತ್ತನ್ನು ಎತ್ತಿ ಎತ್ತಿ ಹುಡುಕಲಾರಂಭಿಸಿದೆವು. ಚಾಲಕನ ಹಿಂಬದಿಯ ಸೀಟಿನಲ್ಲಿ ಕುಳಿತಿದ್ದ ನನ್ನನ್ನು ಹಿಂದಿನಿಂದ ಎರಡನೇ ಸೀಟಿನಲ್ಲಿ ಕುಳಿತಿದ್ದ ದೊಡ್ಡವ್ವ ಕೂಗಿ ಕೂಗಿ ಕರೆಯುತ್ತಿದ್ದುದು ಕೇಳಿಸಿಯೂ ಕೇಳಿಸದಂತೆ ಸುಮ್ಮನೆ ತಲೆ ತಗ್ಗಿಸಿ ಕುಳಿತಿದ್ದೆ. ಹಟ ಬಿಡದ ದೊಡ್ಡವ್ವ, ತಾನು ಕುಳಿತಿದ್ದ ಸೀಟಿನ ಮೇಲೆ ತನ್ನ ಚೀಲವನ್ನೂ, ಪಕ್ಕದಲ್ಲಿ ಕರವಸ್ತ್ರವನ್ನೂ ಹಾಕಿ ನಾನಿದ್ದಲ್ಲಿಗೆ ನುಗ್ಗಿ ಬಂದಳು. ದೊಡ್ಡವ್ವನ ಸಾಮೀಪ್ಯ ಬಯಸದ ಮನಸ್ಸು ಕಷ್ಟಪಟ್ಟು ದೇಹವನ್ನು ಮಾತ್ರ ದೊಡ್ಡವ್ವನ ಪಕ್ಕ ಕೂರಿಸಿತು. ಗದಗಿನಿಂದ ಮುಂದಕ್ಕೆ ಯಾವುದೇ ಊರನ್ನು ನೋಡಿರದ ನಾನು ಕತ್ತಲೆಯಲ್ಲಿ ಮುಳುಗಿದ್ದ ಊರನ್ನಾದರೂ ನೋಡೋಣವೆಂದು ಕಿಟಕಿಯಾಚೆ ಕಣ್ಣನ್ನು ಹರಿಬಿಟ್ಟಿದ್ದೇ ತಪ್ಪೆನ್ನುವಂತೆ ದೊಡ್ಡವ್ವ ಜೋರಾಗಿ ಕಿಟಕಿಯನ್ನು ಮುಚ್ಚಿಬಿಟ್ಟಳು. ಯಾವ ಊರಿಗೆಂದು ತಿಳಿದುಕೊಳ್ಳುವ ಅವಕಾಶ ಈ ಬಾರಿ ದೂರವಾಗಿತ್ತು. ಯಾರು, ಎಲ್ಲಿಗೆ ಟಿಕೇಟು ತಗೆದುಕೊಂಡರೋ ತಿಳಿಯಲಿಲ್ಲ. ಗತಿಯಿಲ್ಲದೆ ನಿದ್ರೆಗೆ ಜಾರಿದ ನನಗೆ ಕನಸಿನಲ್ಲಿ ಹೊಟ್ಟೆ ತೊಳೆಸಿದಂತೆ, ವಾಂತಿ ಬಂದಂತೆ ಭಾಸವಾಗಿ ಎಚ್ಚರಗೊಂಡೆ. ಆಗಲೇ ಸುತ್ತೆಲ್ಲಾ ನೀಲಿ ತುಂಬಿ ಸೂರ್ಯ ಉದಯಿಸುತ್ತಿರುವ